KACD520002142023

**ಕ್ರಿಮಿನಲ್ ಪ್ರಕರಣದ ತೀರ್ಪಿನ ಶೀರ್ಷಿಕೆ ಪುಟ**

ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊಸದುರ್ಗ.

**ಉಪಸ್ಥಿತರುಃ-** ಶ್ರೀ ವೈ. ಕೆ. ಬೇನಾಳ, ಬಿ.ಎ., ಎಲ್.ಎಲ್.ಬಿ., (ಆನರ್ಸ), ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು, ಹೊಸದುರ್ಗ.

**ದಿನಾಂಕ 22 ನೇ ಏಪ್ರಿಲ್ 2026**

**ಅಪರಾಧಿಕ ಪ್ರಕರಣ ಸಂಖ್ಯೆಃ 33/2023**

**ಫಿರ್ಯಾದುದಾರರುಃ-**

ಸರ್ಕಾರದ ಪರ — ಆರಕ್ಷಕ ಉಪ ನಿರೀಕ್ಷಕರು,
ಹೊಸದುರ್ಗ ಠಾಣೆ.
(ವಿಶೇಷ ಸಹಾಯಕ ಸರ್ಕಾರಿ ಅಭಿಯೋಜಕರು)

**ವಿರುದ್ಧ**

**ಆರೋಪಿಗಳು -**

1. ಮಹೇಶ ತಂದೆ ರೇವಣ್ಣ,
   ವಯಸ್ಸು ಸುಮಾರು 35 ವರ್ಷ,
   ವ್ಯವಸಾಯ,

2. ಕೆಂಚಪ್ಪ ತಂದೆ ರೇವಣ್ಣ,
   ವಯಸ್ಸು ಸುಮಾರು 45 ವರ್ಷ,
   ವ್ಯವಸಾಯ,

3. ಓಂಕಾರಪ್ಪ ತಂದೆ ರೇವಣ್ಣ,
   ವಯಸ್ಸು ಸುಮಾರು 34 ವರ್ಷ,
   ವ್ಯವಸಾಯ,

4. ರೇವಣ್ಣ ತಂದೆ ಮುದ್ದುಗಿರಿಯಪ್ಪ,
   ವಯಸ್ಸು ಸುಮಾರು 70 ವರ್ಷ,
   ವ್ಯವಸಾಯ,

YAMANOORAPPA KANAKAPPA BENAL

Digitally signed by YAMANOORAPPA KANAKAPPA BENAL
Date: 2026.04.22 17:43:51 +0530

5. ರಂಗಮ್ಮ ಗಂಡ ರೇವಣ್ಣ,
ವಯಸ್ಸು ಸುಮಾರು 65 ವರ್ಷ,
ಮನೆಗೆಲಸ,

6. ಭಾರತಮ್ಮ ಗಂಡ ಮಹೇಶ ,
ವಯಸ್ಸು ಸುಮಾರು 30 ವರ್ಷ,
ಮನೆಗೆಲಸ,
ಎಲ್ಲರ ವಾಸಃ ಬೋಚೇನಹಳ್ಳಿ ಗ್ರಾಮ,
ಹೊಸದುರ್ಗ ತಾಲ್ಲೂಕು,
ಚಿತ್ರದುರ್ಗ ಜಿಲ್ಲೆ.

(ಆರೋಪಿಗಳ ಪರ ವಕೀಲರು - ಶ್ರೀ ಡಿ. ನಿರಂಜನ್ ಮೂರ್ತಿ)

| | |
|---|---|
| ಅಪರಾಧ ಕೃತ್ಯ ನಡೆದ ದಿನಾಂಕ | - 27-06-2021 |
| ಪಿರ್ಯಾದಿ ಕೊಟ್ಟ ದಿನಾಂಕ | - 01-07-2021 |
| ಪಿರ್ಯಾದಿಯ ಹೆಸರು | - ಮಲ್ಲಿಕಾರ್ಜುನ ತಂದೆ ಕೆಂಚಪ್ಪ |
| ಸಾಕ್ಷಿ ಪ್ರಾರಂಭವಾದ ದಿನಾಂಕ | - 05-02-2026 |
| ಸಾಕ್ಷಿ ಮುಕ್ತಾಯವಾದ ದಿನಾಂಕ | -13-03-2026 |
| ಅಪರಾಧ ಕಲಂ | - ಭಾರತೀಯ ದಂಡ ಸಂಹಿತೆ ಕಲಂ 323, 324, 504, 506 ಹಾಗೂ ಸಹವಾಚಕ ಕಲಂ 149 |
| ನ್ಯಾಯಾಧೀಶರ ಅಭಿಪ್ರಾಯ | - ದೋಷ ಮುಕ್ತಗೊಳಿಸಲಾಗಿದೆ |

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಹೊಸದುರ್ಗ.**

**ತೀರ್ಪು**

ಹೊಸದುರ್ಗ ಆರಕ್ಷಕ ಠಾಣೆಯ ಆರಕ್ಷಕ ಉಪ ನೀರಿಕ್ಷಕರು, ಭಾರತೀಯ ದಂಡ ಸಂಹಿತೆ ಕಲಂ 323, 324, 504, 506 ಹಾಗೂ ಸಹವಾಚಕ ಕಲಂ 149 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧಗಳನ್ನು ಎಸಗಿರುತ್ತಾರೆಂದು, ಆರೋಪಿಗಳ ವಿರುದ್ಧ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ.

**2.** ಗೌರವಾನ್ವಿತ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧಿಶರು ಮತ್ತು ಸಿ.ಜೆ.ಎಂ ನ್ಯಾಯಾಲಯ, ಚಿತ್ರದುರ್ಗ ಇವರ ಅಧಿಸೂಚನೆ ಸಂಖ್ಯೆ 06/2023 ದಿನಾಂಕ 15-02-2023 ರ ಆದೇಶದ ಮೇರೆಗೆ ಈ ಪ್ರಕರಣವನ್ನು ಹೊಸದುರ್ಗ ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಿಂದ ಈ ನ್ಯಾಯಾಲಯಕ್ಕೆ ಇತ್ಯರ್ಥಗೊಳಿಸಲು ವರ್ಗಾವಣೆಗೊಂಡಿರುತ್ತದೆ.

**3**. **<u>ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತೆ ಇರುತ್ತದೆಃ-</u>**

ದಿನಾಂಕಃ27-06-2021 ರಂದು ಸಾಯಂಕಾಲ 4-15 ರ ಸಮಯದಲ್ಲಿ ಹೊಸದುರ್ಗ ತಾಲ್ಲೂಕು ಬೋಚೇನಹಳ್ಳಿ ಗ್ರಾಮದ ಊರಿನ ಮುಂದೆ ಇರುವ ಅರಳಿಮರದ ಕಟ್ಟೆಯ ಹತ್ತಿರ ಇರುವ ರಸ್ತೆಯಲ್ಲಿ ಹಳೆಯ ದ್ವೇಷ ಇಟ್ಟುಕೊಂಡು 1 ನೇ ಆರೋಪಿ ಚಾಸಾ-1 ರವರಿಗೆ ಬಾಯಿಗೆ ಬಂದಂತೆ ಬೈಯ್ದು ಗಲಾಟೆ ಮಾಡಿ ದೊಣ್ಣೆಯಿಂದ ಎಡಭುಜಕ್ಕೆ ಹೊಡೆದು ಗಾಯಪಡಿಸಿದ್ದು ಮತ್ತು 2 ನೇ ಆರೋಪಿ ಚಾಸಾ-1 ರವರಿಗೆ ಕಲ್ಲಿನಿಂದ ಎಡಗಣ್ಣಿಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದಲ್ಲದೇ 3 ರಿಂದ 6 ನೇ ಆರೋಪಿಗಳು ಚಾಸಾ-1 ರವರಿಗೆ ನೆಲಕ್ಕೆ ಕೆಡವಿ ಎಡಗಾಲಿಗೆ ಮತ್ತು ದೇಹದ ಇತರೆ ಭಾಗಗಳಿಗೆ ಹೊಡೆದು ಸೂಳೆ ಮಗನೆ ಬೋಳಿ ಮಗನೆ ನೀನು ಊರಲ್ಲಿ ಬದುಕಿರುತ್ತೀಯಾ ಎಂದು ಪ್ರಾಣ ಬೆದರಿಕೆ ಹಾಕಿ, ಮೇಲೆ ಹೇಳಿದ ಕಲಂಗಳ ರೀತ್ಯ ಶಿಕ್ಷಾರ್ಹವಾದ ಅಪರಾಧಗಳನ್ನು ಎಸಗಿದ್ದಾರೆಂದು ಆರೋಪಿಸಿ, ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

**4.** ದೋಷಾರೋಪಣ ಪತ್ರವನ್ನು ಸಲ್ಲಿಸಿದ ಮೇರೆಗೆ ಭಾರತೀಯ ದಂಡ ಸಂಹಿತೆ ಕಲಂ 323, 324, 504 ಮತ್ತು 506 ಹಾಗೂ ಸಹವಾಚಕ ಕಲಂ 149 ಕ್ಕೆ ಸಂಜ್ಞೆಯನ್ನು ತೆಗೆದುಕೊಂಡು ಆರೋಪಿಗಳ ವಿರುದ್ಧ ಕೇಸನ್ನು ನೋಂದಾಯಿಸಿಕೊಂಡು,

ಆರೋಪಿತರಿಗೆ ಸಮನ್ಸನ್ನು ಕಳುಹಿಸಲಾಗಿ, ಅದಕ್ಕನುಗುಣವಾಗಿ ಆರೋಪಿಗಳು ತಮ್ಮ ವಕೀಲರ ಮೂಲಕ ಹಾಜರಾಗಿ, ಜಾಮೀನು ಅರ್ಜಿ ಸಲ್ಲಿಸಿ, ಜಾಮೀನಿನ ಮೇಲೆ ಬಿಡುಗಡೆಯಾಗಿರುತ್ತಾರೆ. ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರ ಅಡಿಯಲ್ಲಿ, ಅಭಿಯೋಜನೆಯ ದಾಖಲೆಗಳನ್ನು ಆರೋಪಿತರಿಗೆ ಕೊಡಲಾಯಿತು. ದೋಷಾರೋಪಣ ಪತ್ರ ಪರೀಶಿಲಿಸಿ ದೋಷಾರೋಪಣೆಯನ್ನು ರಚಿಸಿ, ಆರೋಪಿತರಿಗೆ ತಿಳಿಯುವಂತೆ ಓದಿ ಹೇಳಲಾಗಿದ್ದು, ತಾವು ಯಾವುದೇ ತಪ್ಪು ಮಾಡಿಲ್ಲ ವಿಚಾರಣೆ ಮಾಡಬೇಕೆಂದು ಕೋರಿದ್ದರ ಮೇರೆಗೆ ವಿಚಾರಣೆಗೆ ಕೈಗೆತ್ತಿಕೊಳ್ಳಲಾಯಿತು.

**5.** ಅಭಿಯೋಜನೆಯು ಒಟ್ಟು 7 ಜನ ಸಾಕ್ಷಿದಾರರ ಪೈಕಿ 5 ಜನ ಸಾಕ್ಷಿದಾರರನ್ನು ಪ್ರಾಸಾ-1 ರಿಂದ 5 ಎಂದು ವಿಚಾರಣೆಗೆ ಒಳಪಡಿಸಿಕೊಂಡಿರುತ್ತದೆ. ಚಾಸಾ-3 ಮತ್ತು 5 ರವರ ಸಾಕ್ಷಿ ವಿಚಾರಣೆಯನ್ನು ಸಹಾಯಕ ಅಭಿಯೋಜಕರ ಕೋರಿಕೆಯ ಮೇರೆಗೆ ಕೈಬಿಟ್ಟಿರುತ್ತದೆ. ಅಭಿಯೋಜನೆಯು ಒಟ್ಟು 5 ದಾಖಲೆಗಳನ್ನು ನಿ.ಪಿ-1 ರಿಂದ 5 ಎಂದು, ಒಂದು ಕೋಲು ಮತ್ತು ಒಂದು ಕಲ್ಲು ನ್ನು ಮು.ಮಾಲು 1 ಮತ್ತು 2 ಎಂದು ಗುರುತಿಸಿಕೊಂಡು ಸಾಕ್ಷಿ ವಿಚಾರಣೆಯನ್ನು ಮುಕ್ತಾಯಗೊಳಿಸಿಕೊಂಡಿರುತ್ತದೆ.

**6.** ತದನಂತರ ಅಪರಾಧಿಕ ಪ್ರ ಸಂ ಕಲಂ 313 ರ ಅಡಿಯಲ್ಲಿ, ಆರೋಪಿತರ ಹೇಳಿಕೆಯನ್ನು ತೆಗೆದುಕೊಳ್ಳಲಾಯಿತು. ಆರೋಪಿಗಳು ತಮ್ಮ ವಿರುದ್ಧ ಇದ್ದಂತಹ ಅಭಿಯೋಜನೆಯ ಎಲ್ಲ ಸಾಕ್ಷಿಯನ್ನು ಸಾರಾಸಗಟಾಗಿ ಸುಳ್ಳು ಎಂದು ತಳ್ಳಿಹಾಕಿರುತ್ತಾರೆ ಮತ್ತು ತಮ್ಮ ಪರ ಯಾವುದೇ ಸಾಕ್ಷಿ ವಿಚಾರಣೆ ಮಾಡಿಕೊಂಡಿರುವುದಿಲ್ಲ.

**7.** ಸಹಾಯಕ ಸರ್ಕಾರಿ ಅಭಿಯೋಜಕರ ಮತ್ತು ಆರೋಪಿಗಳ ಪರ ವಕೀಲರ ವಾದವನ್ನು ಆಲಿಸಲಾಯಿತು.

**8**. ನನ್ನ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವಿಸುತ್ತವೆ:-

1) ದಿನಾಂಕಃ27-06-2021 ರಂದು ಸಾಯಂಕಾಲ 4.15 ರ ಸಮಯದಲ್ಲಿ, ಹೊಸದುರ್ಗ ತಾಲ್ಲೂಕು, ಬೋಚೇನಹಳ್ಳಿ ಗ್ರಾಮದ ಊರಿನ ಮುಂದೆ ಇರುವ ಅರಳಿಮರದ ಕಟ್ಟೆಯ ಹತ್ತಿರ ಇರುವ ರಸ್ತೆಯಲ್ಲಿ ಚಾಸಾ-1 ಇರುವಾಗ, ಆರೋಪಿಗಳು ಹಳೆಯ ದ್ವೇಷ ಇಟ್ಟುಕೊಂಡು ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು, ಭಾರತೀಯ ದಂಡ ಸಂಹಿತೆ ಕಲಂ 504 ಹಾಗೂ ಸಹವಾಚಕ ಕಲಂ 149 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದ್ದಾರೆ ಎನ್ನುವುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸಿರುತ್ತದೆಯೇ?

2) ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ 3 ರಿಂದ 6 ಆರೋಪಿಗಳು ಚಾಸಾ-1 ರವರಿಗೆ ನೆಲಕ್ಕೆ ಕೆಡವಿ ಎಡಗಾಲಿಗೆ ಮತ್ತು ದೇಹದ ಇತರೆ ಭಾಗಗಳಿಗೆ ಹೊಡೆದು, ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿ, ಭಾರತೀಯ ದಂಡ ಸಂಹಿತೆ ಕಲಂ 323 ಹಾಗೂ ಸಹವಾಚಕ ಕಲಂ 149 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದ್ದಾರೆ ಎನ್ನುವುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸಿರುತ್ತದೆಯೇ?

3) ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ 1 ನೇ ಆರೋಪಿ ಚಾಸಾ-1 ರವರಿಗೆ ದೊಣ್ಣೆಯಿಂದ ಎಡಭುಜಕ್ಕೆ ಹೊಡೆದು, 2 ನೇ ಆರೋಪಿ ಕಲ್ಲಿನಿಂದ ಎಡಗಣ್ಣಿಗೆ ಹೊಡೆದು, ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿ, ಭಾರತೀಯ ದಂಡ ಸಂಹಿತೆ ಕಲಂ 324 ಹಾಗೂ ಸಹವಾಚಕ ಕಲಂ 149 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದ್ದಾರೆ ಎನ್ನುವುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸಿರುತ್ತದೆಯೇ?

4) ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರು ಚಾಸಾ-1 ರವರಿಗೆ ಊರಲ್ಲಿ ಬದುಕಿರುತ್ತೀಯಾ ಎಂದು ಪ್ರಾಣ ಬೆದರಿಕೆ ಹಾಕಿ, ಭಾರತೀಯ ದಂಡ ಸಂಹಿತೆ ಕಲಂ 506 ಹಾಗೂ ಸಹವಾಚಕ ಕಲಂ 149 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದ್ದಾರೆ ಎನ್ನುವುದನ್ನು ಅಭಿಯೋಜನೆಯು ಸಂಶಯಾತೀತವಾಗಿ

ಸಾಭೀತುಪಡಿಸಿರುತ್ತದೆಯೇ?

5) ಯಾವ ಆದೇಶ ?

**9.** ಮೇಲಿನ ಅಂಶಗಳಿಗೆ ಈ ಕೆಳಕಂಡ ಕಾರಣಗಳಿಗಾಗಿ ಈ ಕೆಳಗಿನಂತೆ ಉತ್ತರಿಸುತ್ತಿದ್ದೇನೆ:-

ಅಂಶ-1 - ನಕಾರಾತ್ಮಕ

ಅಂಶ-2 - ನಕಾರಾತ್ಮಕ

ಅಂಶ-3 - ನಕಾರಾತ್ಮಕ

ಅಂಶ-4 - ನಕಾರಾತ್ಮಕ

ಅಂಶ-5 - ಅಂತಿಮ ಆದೇಶದಂತೆ:

## ಕಾರಣಗಳು

**10.** **ಅಂಶ-1 ರಿಂದ 4** - ಈ ನಾಲ್ಕು ಅಂಶಗಳು ಮೇಲ್ನೋಟಕ್ಕೆ ಬೇರೆ ಬೇರೆಯಾಗಿ ಕಂಡುಬಂದರು ಸಹ, ಆಂತರಿಕವಾಗಿ ಒಂದಕ್ಕೊಂದು ಸಂಬಂಧಹೊಂದಿರುವುದರಿಂದ ವಿಷಯಗಳ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಒಟ್ಟಿಗೆ ಪರಿಗಣಿಸಲಾಗಿದೆ.

ಅಭಿಯೋಜನೆ ಕೇಸಿನ ಪರ ಸಾಕ್ಷಿ ನುಡಿದ, ಪಿರ್ಯಾದುದಾರನಾದ ಪ್ರಾಸಾ-3 ತನ್ನ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ, ದಿನಾಂಕ: 27-06-2021 ರಂದು ಮಧ್ಯಾಹ್ನ 4-15 ರ ಸಮಯದಲ್ಲಿ ತಮ್ಮ ಊರಿನ ಅರಳೀಕಟ್ಟೆಯ ಹತ್ತಿರ ತಾನು ಹಿತ್ತಲಿನಿಂದ ವಾಪಸ್ ಬರುತ್ತಿದ್ದಾಗ 1 ನೇ ಆರೋಪಿ ತನಗೆ ಬೈದು ಏಕಾಏಕಿ ದೊಣ್ಣೆಯಿಂದ ಎಡಭುಜಕ್ಕೆ ಹೊಡೆದಿದ್ದು, ಅಷ್ಟೊತ್ತಿಗೆ 2 ನೇ ಆರೋಪಿ ಅಲ್ಲಿಗೆ ಬಂದು ಕಲ್ಲಿನಿಂದ ತನ್ನ ಎಡಗಣ್ಣಿಗೆ ಹೊಡೆದಿದ್ದು, 3 ರಿಂದ 7 ನೇ ಆರೋಪಿಗಳು ಅಲ್ಲಿಗೆ ಬಂದು ತನ್ನನ್ನು ಹಿಡಿದು ಎಳೆದಾಡಿ ಕಾಲಿನಿಂದ ತನ್ನನ್ನು ತುಳಿದು ಬೋಳಿಮಗನೇ, ಸೂಳೇಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದು, ಚಾಸಾ-4 ಮತ್ತು 5 ರವರು ಗಲಾಗೆಯನ್ನು ನೋಡಿ ಬಿಡಿಸಿದ್ದು,

ತನ್ನನ್ನು ಆಟೋದಲ್ಲಿ ಹೊಸದುರ್ಗ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಸದರಿ ಆಸ್ಪತ್ರೆಯ ವೈದ್ಯರು ತನ್ನನ್ನು ನೋಡಿ ಹೆಚ್ಚಿನ ಚಿಕಿತ್ಸೆಗೆ ಚಿತ್ರದುರ್ಗದ ಜಿಲ್ಲಾ ಆಸ್ಪತ್ರೆಗೆ ಕಳುಹಿಸಿದ್ದು, ದಿನಾಂಕಃ 01-07-2021 ರಂದು ರಾತ್ರಿ 8.30 ರ ಸಮಯದಲ್ಲಿ ಹೊಸದುರ್ಗ ಪೋಲೀಸ್ ಠಾಣೆಗೆ ಹೋಗಿ ಪಿರ್ಯಾದಿಯನ್ನು ಕೊಟ್ಟಿರುತ್ತೇನೆ. ದಿನಾಂಕಃ 02-07-2021 ರಂದು ಮಧ್ಯಾಹ್ನ 3.00 ಗಂಟೆಗೆ ತಾನು ತೋರಿಸಿದ ಮೇರೆಗೆ ಪಂಚರಾದ ಚಾಸಾ-2 ಮತ್ತು 3 ರ ಸಮಕ್ಷಮ ಚಾಸಾ-7 ರವರು ಪಂಚನಾಮೆಯನ್ನು ಮಾಡಿ, ಕಚ್ಚಾನಕಾಶೆಯನ್ನು ತಯಾರಿಸಿ, ಒಂದು ಕೋಲು ಮತ್ತು ಒಂದು ಕಲ್ಲನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾನೆ.

**11**. ಅಭಿಯೋಜನೆಯ ಕೇಸಿನ ಪರ ಸಾಕ್ಷಿ ನುಡಿದ, ಪ್ರಾಸಾ-4 ತನ್ನ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ದಿನಾಂಕಃ 27-06-2021 ಮಧ್ಯಾಹ್ನ 4.15 ರ ಸಮಯದಲ್ಲಿ, ತಮ್ಮ ಊರಿನ ಅರಳೀಕಟ್ಟೆಯ ಹತ್ತಿರ ಆರೋಪಿಗಳು ಮತ್ತು ಚಾಸಾ-1 ರವರು ಮಧ್ಯೆ ಗಲಾಟೆ ಆಗಿದ್ದು, 1 ನೇ ಆರೋಪಿ ಕೋಲಿನಿಂದ ಚಾಸಾ-1 ರವರ ಎಡಗೈಗೆ ಹಳೇ ದ್ವೇಷದಿಂದ ಹೊಡೆದಿದ್ದು, 2 ನೇ ಆರೋಪಿ ಕಲ್ಲಿನಿಂದ ಚಾಸಾ-1 ರವರ ಎಡಗಣ್ಣಿಗೆ ಹೊಡೆದಿದ್ದು, 3 ರಿಂದ 7 ನೇ ಆರೋಪಿಗಳು ಒಟ್ಟಿಗೆ ಸೇರಿ ಗಲಾಟೆ ಮಾಡಿ ಚಾಸಾ-1 ರವರಿಗೆ ಹೊಡೆದಿದ್ದು, ಚಾಸಾ-1 ರವರಿಗೆ ರಕ್ತ ಸೋರುತ್ತಿದ್ದು, ತಾನು ಮತ್ತು ಚಾಸಾ-5 ಸೇರಿ ಚಾಸಾ-1 ರವರನ್ನು ಆಟೋದಲ್ಲಿ ಹೊಸದುರ್ಗದ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಬಂದಿದ್ದು, ಗಲಾಟೆಯಲ್ಲಿ ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಪ್ರಾಣ ಬೆದರಿಕೆಯನ್ನು ಹಾಕಿದ್ದು, ತಾನು ಆ ಕುರಿತು ಪೋಲೀಸರಿಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾನೆ.

**12**. ಅಭಿಯೋಜನೆಯ ಕೇಸಿನ ಪರ ಸಾಕ್ಷಿ ನುಡಿದ, ಪ್ರಾಸಾ-5 ತನ್ನ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ದಿನಾಂಕಃ 02-07-2021 ರಂದು ಬೋಚೇನಹಳ್ಳಿ ಗ್ರಾಮದ ಅರಳೀಕಟ್ಟೆಯ ಹತ್ತಿರ ಆರೋಪಿಗಳು ಮತ್ತು ಚಾಸಾ-1 ರವರ ಮಧ್ಯೆ ಗಲಾಟೆ ಆಗಿದ್ದರ ವಿಚಾರವಾಗಿ ಪೋಲೀಸರು ಪಂಚನಾಮೆಗೆ ಬಂದಿದ್ದರಿಂದ, ತಾನು ಗುನ್ಹೆಸ್ಥಳ ಮತ್ತು ಕಚ್ಚಾನಕಾಶೆಗೆ ಸಹಿ ಮಾಡಿದ್ದು, ಪೋಲೀಸರಿಗೆ ಸ್ಥಳ ಚಾಸಾ-1 ತೋರಿಸಿದ್ದು, ಆ

ಸಮಯದಲ್ಲಿ ತನ್ನ ಜೊತೆ ಚಾಸಾ-3 ಇದ್ದ. ಮಧ್ಯಾಹ್ನ 3.00 ರಿಂದ 4.00 ಗಂಟೆಯವರೆಗೆ ಪಂಚನಾಮೆಯನ್ನು ಮಾಡಿ ಒಂದು ಕಲ್ಲು ಮತ್ತು ಒಂದು ಕೋಲನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾನೆ.

**13**. ಅಭಿಯೋಜನೆಯ ಕೇಸಿನ ಪರ ಸಾಕ್ಷಿ ನುಡಿದ, ವೈದ್ಯರಾದ ಪ್ರಾಸಾ-1 ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ದಿಃ 27.06.2021 ರಂದು ಸಾಯಂಕಾಲ 5-00 ರ ಸಮಯದಲ್ಲಿ ಚಾಸಾ-1 ರವರು ಹಲ್ಲೆಯ ಹಿನ್ನೆಲೆಯಲ್ಲಿ ಚಿಕಿತ್ಸೆಗೆ ಬಂದಿದ್ದು, ತಾನು ಚಾಸಾ 01 ರವರ ಪರೀಕ್ಷಿಸಲಾಗಿ, ಚಾಸಾ-1 ರವರಿಗೆ ಬಲ ಕಣ್ಣಿನ ಕೆಳಭಾಗದಲ್ಲಿ ಕತ್ತರಿಸಿದ ಗಾಯ 1.5X1 cm ಮತ್ತು ಎಡಭುಜದಲ್ಲಿ ನೋವು ಇದ್ದು, ಆ ಕುರಿತು ತಾನು ಚಿಕಿತ್ಸೆಯನ್ನು ನೀಡಿ ಗಾಯದ ಪ್ರಮಾಣ ಪತ್ರವನ್ನು ಕೊಟ್ಟಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ.

**14**. ಅಭಿಯೋಜನೆಯ ಕೇಸಿನ ಪರ ಸಾಕ್ಷಿ ನುಡಿದ, ತನಿಖಾಧಿಕಾರಿಯಾದ ಪ್ರಾಸಾ-2 ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ ಸಹಜವಾಗಿಯೇ ಅಭಿಯೋಜನೆಯ ಕೇಸಿಗೆ ಪೂರಕವಾಗಿ ಸಾಕ್ಷಿ ನುಡಿದಿರುತ್ತಾರೆ. ಆದರೆ, ಪಂಚನಾದ ಪ್ರಾಸಾ-5 ತನ್ನ ಪಾಟಿಸವಾಲಿನಲ್ಲಿ ನಿಪಿ-3 ಕ್ಕೆ ವ್ಯತಿರಿಕ್ತವಾಗಿ ಗುನ್ಹ ಸ್ಥಳದ ದಕ್ಷಿಣದ ಚೆಕ್ಕುಬಂದಿ ಸಿಸಿ ರಸ್ತೆ ಎನ್ನುವುದರ ಬದಲಾಗಿ ಅರಳಿಕಟ್ಟೆ ಇರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾನೆ.

**15**. ಪ್ರಾಸಾ-3 ತನ್ನ ಪಾಟಿಸವಾಲಿನಲ್ಲಿ, ಗಲಾಟೆಯಾದಾಗ ಅಲ್ಲಿ ಇಬ್ಬರು ಇದ್ದರು ಎಂದು ಸಾಕ್ಷಿ ನುಡಿದಿರುತ್ತಾನೆ. ಆದರೆ ಪ್ರಾಸಾ-3 ರವರ ಸಾಕ್ಷಿಗೆ ವ್ಯತಿರಿಕ್ತವಾಗಿ ಗಲಾಟೆ ನಡೆದ ಸಮಯದಲ್ಲಿ 3-4 ಜನ ಅಲ್ಲಿ ಇದ್ದರು. 4-5 ಜನ ನಿಂತು ನೋಡುತ್ತಿದ್ದರು, ಆದರೆ ಅವರ ಹೆಸರು ಗೊತ್ತಿಲ್ಲ ಎಂದು ಸಾಕ್ಷಿ ನುಡಿದಿರುತ್ತಾನೆ. ಅಲ್ಲದೆ, ತನ್ನ ಪಾಟಿಸವಾಲಿನಲ್ಲಿ ಯಾರಾರು ಯಾವ ಭಾಗಕ್ಕೆ ಹೊಡೆದಿರುತ್ತಾರೆಂದು ಹೇಳಲು ಆಗುವುದಿಲ್ಲ. ಯಾರು ಏನೆಂದು ಬೈದಿರುತ್ತಾರೆ ಎಂದು ನಿರ್ಧಿಷ್ಟವಾಗಿ ಹೇಳಲು

ಆಗುವುದಿಲ್ಲ ಎಂದು ಸಾಕ್ಷಿ ನುಡಿದ ಕಾರಣ, ಪಿಡಬ್ಲೂ-4 ರವರಿಗೆ ಯಾರು ಯಾವ ಭಾಗಕ್ಕೆ ಹೊಡೆದಿರುತ್ತಾರೆ ಎಂದು ಗೊತ್ತಿಲ್ಲ ಹಾಗೂ ಏನೆಂದು ಬೈದಿರುತ್ತಾರೆ ಎಂದು ಸಹ ಗೊತ್ತಿಲ್ಲವೆಂದು ಕಂಡುಬರುತ್ತದೆ.

**16**. ಪ್ರಾಸಾ-3 ತನ್ನ ಪಾಟಿಸವಾಲಿನಲ್ಲಿ, ಯಾವ ಸ್ಥಳದಲ್ಲಿ ಯಾರು ತನಗೆ ಹಲ್ಲೆ ಮಾಡಿರುತ್ತಾರೆ ಎನ್ನುವುದನ್ನು ವೈದ್ಯರಿಗೆ ತಿಳಿಸಿರುತ್ತೇನೆ. ವೈದ್ಯರ ಮೂಲಕ ಪಿರ್ಯಾದಿಯನ್ನು ಪೋಲೀಸರಿಗೆ ಕೊಡಲು ತಾನು ತಿಳಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾನೆ. ಆದರೆ, ವೈದ್ಯರಾದ ಪ್ರಾಸಾ-1 ತಮ್ಮ ಪಾಟಿಸವಾಲಿನಲ್ಲಿ ಯಾರು ಯಾರು ಯಾವ ಸ್ಥಳದಲ್ಲಿ ಹಲ್ಲೆ ಮಾಡಿರುತ್ತಾರೆ ಎಂದು ನಿರ್ಧಿಷ್ಟವಾಗಿ ತನ್ನ ಮುಂದೆ ಹೇಳಿಲ್ಲವೆಂದು ಸಾಕ್ಷಿ ನುಡಿದ ಕಾರಣ, ಪ್ರಾಸಾ-1 ಮತ್ತು 3 ರವರು ಸದರಿ ವಿಷಯವಾಗಿ ಒಬ್ಬರಿಗೊಬ್ಬರು ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿರುತ್ತಾರೆ. ಅಲ್ಲದೆ, ಪ್ರಾಸಾ-3 ತನ್ನ ಪಾಟಿಸವಾಲಿನಲ್ಲಿ ತಮಗೂ ಆರೋಪಿಗಳಿಗೂ ಜಾಗದ ವಿಚಾರವಾಗಿ, ಮೂಲ ದಾವೆ ನಂ-206/2021 ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿರುತ್ತದೆ ಎನ್ನುವುದು ನಿಜ. ಆರೋಪಿಗಳಿಗೆ ತಾನು ಹೊಡೆದಿದ್ದರಿಂದ, ಸಿಸಿ.ನಂ-32/2023 ತಮ್ಮ ಮೇಲೆ ದಾಖಲಾಗಿರುತ್ತದೆ ಎನ್ನುವುದು ಸರಿಯಲ್ಲ. ಸದರಿ ಕೇಸು ಇದೇ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿ ಇರುತ್ತದೆ ಎನ್ನುವುದು ನಿಜವೆಂದು ಸಾಕ್ಷಿ ನುಡಿದ ಕಾರಣ ಹಾಗೂ ಪ್ರಾಸಾ-4 ತನ್ನ ಪಾಟಿಸವಾಲಿನಲ್ಲಿ ಜಾಗದ ವಿಚಾರವಾಗಿ ಆರೋಪಿಗಳಿಗೂ ಮತ್ತು ಚಾಸಾ-1 ರವರಿಗೂ ವ್ಯಾಜ್ಯ ಇರುತ್ತದೆ ಎನ್ನುವುದು ನಿಜವೆಂದದು ಸಾಕ್ಷಿ ನುಡಿದಿರುವುದರಿಂದ, ಆರೋಪಿಗಳು ಮತ್ತು ಪ್ರಾಸಾ-3 ರವರ ಮಧ್ಯೆ ಸಿವಿಲ್ ವ್ಯಾಜ್ಯದ ಸಲುವಾಗಿ, ಮೊದಲಿನಿಂದಲೂ ವೈಷಮ್ಯ ಇರುವುದು ಕಂಡುಬರುತ್ತಿರುವುದರಿಂದ ಹಾಗೂ ನಿಪಿ-2 ರ ಪ್ರಕಾರ ದಿನಾಂಕಃ 27-06-2021 ರಂದು ಗಲಾಟೆಯಾಗಿದ್ದರೂ ಸಹ, ದಿನಾಂಕಃ 01-07-2021 ರಂದು ಅಂದರೆ 4 ದಿನಗಳ ಕಾಲ

ತಡವಾಗಿ ಪಿರ್ಯಾದಿಯನ್ನು ಕೊಟ್ಟಿದ್ದು, ಆ ರೀತಿ ತಡವಾಗಿರುವುದಕ್ಕೆ ಚಿತ್ರದುರ್ಗದ ಸರ್ಕಾರಿ ಆಸ್ಪತ್ರೆಯಲ್ಲಿ ಹೆಚ್ಚಿನ ಚಿಕಿತ್ಸೆಗೆ ಪ್ರಾಸಾ-3 ದಾಖಲಾಗಿದ್ದ ಎನ್ನುವುದಾಗಿದ್ದು, ಆದರೆ ಆ ರೀತಿ ಚಿತ್ರದುರ್ಗದ ಸರ್ಕಾರಿ ಆಸ್ಪತ್ರೆಯಲ್ಲಿ ಹೆಚ್ಚಿನ ಚಿಕಿತ್ಸೆಗೆ ದಾಖಲಾಗಿದ್ದ ಎನ್ನುವುದಕ್ಕೆ ಯಾವುದೇ ದಾಖಲಾತಿ ಸಾಕ್ಷಿ ಅಭಿಯೋಜನೆಯ ಪರ ಇಲ್ಲದೆ ಇರುವ ಕಾರಣ, ಅಭಿಯೋಜನೆಯು ದೋಷಾರೋಪಣಾ ಪತ್ರದಲ್ಲಿ ಆರೋಪಿಸಿದಂತೆ, ಬೋಚೇನಹಳ್ಳಿ ಗ್ರಾಮದ ಊರಿನ ಮುಂದೆ ಇರುವ ಅರಳಿಮರದ ಕಟ್ಟೆಯ ಹತ್ತಿರ ಇರುವ ರಸ್ತೆಯಲ್ಲಿ ಹಳೆಯ ದ್ವೇಷ ಇಟ್ಟುಕೊಂಡು 1 ನೇ ಆರೋಪಿ ಪ್ರಾಸಾ-3 ರವರಿಗೆ ಬಾಯಿಗೆ ಬಂದಂತೆ ಬೈಯ್ದು ಗಲಾಟೆ ಮಾಡಿ ದೊಣ್ಣೆಯಿಂದ ಎಡಭುಜಕ್ಕೆ ಹೊಡೆದು ಗಾಯಪಡಿಸಿದ್ದು ಮತ್ತು 2 ನೇ ಆರೋಪಿ ಪ್ರಾಸಾ-3 ರವರಿಗೆ ಕಲ್ಲಿನಿಂದ ಎಕಗಣ್ಣಿಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದಲ್ಲದೇ 3 ರಿಂದ 6 ನೇ ಆರೋಪಿಗಳು ಪ್ರಾಸಾ-3 ರವರಿಗೆ ನೆಲಕ್ಕೆ ಕೆಡವಿ ಎಡಗಾಲಿಗೆ ಮತ್ತು ದೇಹದ ಇತರೆ ಭಾಗಗಳಿಗೆ ಹೊಡೆದು ಸೂಳೆ ಮಗನೆ ಬೋಳಿ ಮಗನೆ ನೀನು ಊರಲ್ಲಿ ಬದುಕಿರುತ್ತೀಯಾ ಎಂದು ಪ್ರಾಣ ಬೆದರಿಕೆ ಹಾಕಿರುತ್ತಾರೆ ಎನ್ನುವುದು ಸಂಶಯವನ್ನುಂಟು ಮಾಡುತ್ತದೆ. ಆದರೆ, ಅಪರಾಧಿಕ ನ್ಯಾಯ ಶಾಸ್ತ್ರದ ತತ್ವದಂತೆ, ಆರೋಪಿಗಳು ದೋಷರೋಪಣಾ ಪತ್ರದಲ್ಲಿ ಆರೋಪಿಸಿದಂತೆ, ಶಿಕ್ಷಾರ್ಹವಾದ ಅಪರಾಧಗಳನ್ನು ಎಸಗಿದ್ದಾರೆ ಎನ್ನುವುದನ್ನು ಯುಕ್ತ ಸಂಶಯ ಮೀರಿ ಸಾಭೀತುಪಡಿಸಬೇಕು, ಆದರೆ ಅಭಿಯೋಜನೆಯ ಕೇಸು ಸಂಶಯವನ್ನುಂಟು ಮಾಡುತ್ತಿರುವುದರಿಂದ, ಸಂಶಯದ ಲಾಭವನ್ನು ಆರೋಪಿಗಳಿಗೆ ನೀಡಬೇಕಾಗಿರುವುದರಿಂದ, ಅದರಂತೆ ಸಂಶಯದ ಲಾಭವನ್ನು ಆರೋಪಿಗಳಿಗೆ ನೀಡಿ **ಅಂಶ 1 ರಿಂದ 4 ನ್ನು ನಕಾರಾತ್ಮಕವಾಗಿ ಉತ್ತರಿಸಿದ್ದೇನೆ.**

**17. ಅಂಶ-5**- ಈ ಮೇಲಿನ ಅಂಶಗಳಲ್ಲಿ ಚರ್ಚಿಸಲಾದ ಕಾರಣಗಳಿಂದಾಗಿ ಈ ಕೆಳಗಿನಂತೆ ಮಾಡಿದಃ-

**ಆದೇಶ**

ಆರೋಪಿಗಳು ಭಾರತೀಯ ದಂಡ ಸಂಹಿತೆ ಕಲಂ 323, 324, 504, 506 ಹಾಗೂ ಸಹವಾಚಕ ಕಲಂ 149 ರ ಅಡಿಯಲ್ಲಿ, ಶಿಕ್ಷಾರ್ಹವಾದ ಅಪರಾಧಗಳನ್ನು ಎಸಗಿದ್ದಾರೆಂದು ಅಭಿಯೋಜನೆಯು ನಿರೂಪಿಸಲು ವಿಫಲವಾಗಿರುತ್ತದೆ.

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1)ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಆರೋಪಿಗಳನ್ನು ಭಾರತೀಯ ದಂಡ ಸಂಹಿತೆ ಕಲಂ 323, 324, 504, 506 ಹಾಗೂ ಸಹವಾಚಕ ಕಲಂ 149 ರ ಅಡಿಯಲ್ಲಿನ ಶಿಕ್ಷಾರ್ಹವಾದ ಆರೋಪಗಳಿಂದ ದೋಷಮುಕ್ತಗೊಳಿಸಿ ಬಿಡುಗಡೆಗೊಳಿಸಿರುತ್ತೇನೆ.

ಆರೋಪಿಗಳು ಈ ಮುಂಚೆ ಅಧಿವಿಚಾರಣೆಯ ಕಾಲಕ್ಕೆ ಬರೆದುಕೊಟ್ಟ ಜಾಮೀನು ಮುಚ್ಚಳಿಕೆಗಳನ್ನು ರದ್ದುಪಡಿಸಲು ಆದೇಶಿಸಿದೆ.

ಮುದ್ದೆ ಮಾಲು-1: ಒಂದು ಕೋಲು ಮತ್ತು ಮುದ್ದೆ ಮಾಲು -2: ಒಂದು ಕಲ್ಲು ಬೆಲೆ ರಹಿತವಾಗಿರುವುದರಿಂದ, ಮೇಲ್ಮನವಿ ಅವಧಿ ಮುಗಿದ ನಂತರ ನಾಶಪಡಿಸಲು ಆದೇಶಿದೆ.

(ನನ್ನ ಉಕ್ತಲೇಖನದ ಪ್ರಕಾರ ಶೀಘ್ರಲಿಪಿಗಾರರಿಂದ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ಅದರಲ್ಲಿದ್ದ ಲೋಪದೋಷಗಳನ್ನು ತಿದ್ದಿ, ಇಂದು **ದಿನಾಂಕ 22ನೇ ಏಪ್ರಿಲ್ 2026** ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

**(ವೈ. ಕೆ. ಬೇನಾಳ)**
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ**
**ಹೊಸದುರ್ಗ.**

**ಅನುಭಂದ**

**ಅಭಿಯೋಜನೆಯ ಪರ ಮಾಡಿಸಲಾದ ಸಾಕ್ಷಿಗಳ ವಿವರಃ-**

ಪ್ರಾಸಾ-1 - ಡಾಃ ವಿಶ್ವನಾಥ ವಿ.ಆರ್ ತಂದೆ ರಾಮಪ್ಪ ಕೆ

ಪ್ರಾಸಾ-2 - ಜಯರಾಜ್ ತಂದೆ ಎಸ್.ಆರ್. ಜಾನಯ್ಯ

ಪ್ರಾಸಾ-3 - ಮಲ್ಲಿಕಾರ್ಜುನ ತಂದೆ ಕೆಂಚಪ್ಪ

ಪ್ರಾಸಾ-4 - ರಾಮಕೃಷ್ಣಪ್ಪ ಬಿ ತಂದೆ ಕದುರಪ್ಪ

ಪ್ರಾಸಾ-5 - ಅರುಣ್ ಕುಮಾರ್ ತಂದೆ ಚಿದಾನಂದ

**ಅಭಿಯೋಜನೆಯ ಪರ ಗುರುತಿಸಲಾದ ದಾಖಲೆಗಳುಃ-**

ನಿಪಿ-1 - ಗಾಯದ ಪ್ರಮಾಣ ಪತ್ರ

ನಿಪಿ-2 - ಪಿರ್ಯಾದಿ

ನಿಪಿ-3 - ಗುನ್ಯ ಸ್ಥಳ ಪಂಚನಾಮೆ

ನಿಪಿ-4 - ಕಚ್ಚಾ ನಕಾಶೆ

ನಿಪಿ-5 - ಪ್ರಥಮ ವರ್ತಮಾನ ವರದಿ

**ಆರೋಪಿತರ ಪರ ವಿಚಾರಣೆ ಮಾಡಲಾದ ಸಾಕ್ಷಿಗಳ ವಿವರಃ-**

---ಇಲ್ಲ----

**ಆರೋಪಿತರ ಪರ ಗುರುತಿಸಲಾದ ದಾಖಲೆಗಳುಃ-**

---ಇಲ್ಲ-----

**ಮುದ್ದೆಮಾಲುಗಳ ಪಟ್ಟಿಃ-**

ಮುದ್ದೆ ಮಾಲು -1 - ಒಂದು ಕೋಲು

ಮುದ್ದೆ ಮಾಲು -2 - ಒಂದು ಕಲ್ಲು

ಸಹಿ/-

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ**

**ಹೊಸದುರ್ಗ.**